## 'ದರಿದ್ರ ದೇವೋ ಭವ !'

**– ವಿಶೇಷ ಆಧ್ಯಾತ್ಮಿಕ ಶಿಬಿರಗಳು**

ಶ್ರೀರಾಮಕೃಷ್ಣರ ಪ್ರೇಮಪ್ರವಾಹವು ಸಮಾಜದ ಎಲ್ಲ ವರ್ಗದ ಜನರಿಗೂ ತಲುಪುವುದು ಅಗತ್ಯವೆಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಶ್ರೀರಾಮಕೃಷ್ಣರು ತಮ್ಮ ಜೀವನದಲ್ಲಿ ತೋರಿದ ಭೇದರಹಿತ ಭಾವನೆಯನ್ನು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಇತ್ತೀಚಿನ ತಿಂಗಳುಗಳಲ್ಲಿ ಆಟೋರಿಕ್ಷಾ ಚಾಲಕರಿಗೆ, ಚಮ್ಮಾರ ಬಂಧುಗಳಿಗೆ ಮತ್ತು ಕೊಳಚೆಗೇರಿಯ ಗುಡಿಸಲು ವಾಸಿಗಳಿಗಾಗಿಯೆ ವಿಶೇಷವಾಗಿ ಏರ್ಪಡಿಸಿದ್ದ ಆಧ್ಯಾತ್ಮಿಕ ಶಿಬಿರಗಳ ಮೂಲಕ ಅನುಷ್ಠಾನಕ್ಕೆ ತರಲು ಪ್ರಯತ್ನಿಸಿತು.

ಆಶ್ರಮದ ಭಕ್ತರಾದ ಶ್ರೀ ಸ್ವಾಮಿಲಿಂಗಪ್ಪ ಅವರ ಅವಿರತ ಪರಿಶ್ರಮದ ಫಲವೇ ಈ ಶಿಬಿರಗಳು. ರಾಮಕೃಷ್ಣ ಮಹಾಸಂಘದ ಕೋಮು ಅಥವಾ ಜಾತಿರಹಿತ ಧಾರ್ಮಿಕ ನಿಲುವನ್ನು ಗುಡಿಸಲು ವಾಸಿಗಳು ಮತ್ತು ಆಟೋರಿಕ್ಷಾ ಚಾಲಕರ ಮನಸ್ಸಿನ ಮೇಲೆ ಅವರು ಬಿಂಬಿಸಿದರು. ಧರ್ಮವು ಯಾವುದೇ ಒಂದು ಪಂಗಡಕ್ಕೆ ಸೀಮಿತವಲ್ಲ, ದೇವರಲ್ಲಿ ಯಾವುದೇ ತಾರತಮ್ಯವಿಲ್ಲ ಎಂಬ ಅಂಶವನ್ನು ಒತ್ತಿಹೇಳಿ ಅವರನ್ನು ಈ ಶಿಬಿರಗಳಿಗೆ ಕರೆತಂದರು.

ಈ ಶಿಬಿರಗಳನ್ನು ನಡೆಸಲು ಇರುವ ದೊಡ್ಡ ಅಡಚಣೆಯೆಂದರೆ ಕೊಳಚೆಗೇರಿಯ ಬಂಧುಗಳಿಗೆ ಇರುವ ಕೀಳರಿಮೆ. ತಮ್ಮ ಜೀವನಶೈಲಿ, ಮಾಂಸಾಹಾರ ಮತ್ತು ಮದ್ಯಸೇವನೆಗಳ ದೆಸೆಯಿಂದ ತಾವು ಆಶ್ರಮವನ್ನು ಪ್ರವೇಶಿಸಲೂ ಅನರ್ಹರು ಎಂಬ ಭಾವನೆ ಅವರಲ್ಲಿ ಗಾಢವಾಗಿ ಬೇರೂರಿದೆ. ಅದಕ್ಕಾಗಿ ಸ್ವಾಮಿಲಿಂಗಪ್ಪನವರು ಅವರಿದ್ದಡೆಯೆ ಭಗವನ್ನಾಮ ಸಂಕೀರ್ತನೆಯಂತಹ ಸರಳ ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಿದರು. **'ಓಂ ನಮಃ ಶಿವಾಯ'** ಮಂತ್ರದ ಸಾಮೂಹಿಕ ಉಚ್ಚರಣೆಯನ್ನು ಹಲವು ದಿನಗಳ ಕಾಲ ಮಾಡಿಸಿದರು. ಮದ್ಯಸೇವನೆಯನ್ನು ಸಾಧ್ಯವಾದಷ್ಟು ಕೈ ಬಿಡಲು ಪ್ರೋತ್ಸಾಹಿಸಿದರು. ಅಲ್ಲಿನ ಕೆಲವು ಜನರನ್ನು ಭಾನುವಾರದಂದು ಆಶ್ರಮದಲ್ಲಿ ನಡೆಯುವ ಪ್ರವಚನಗಳಿಗೆ ಮತ್ತು ವಿಶೇಷ ಸಂಧ್ಯಾರತಿ-ಭಜನಾ ಕಾರ್ಯಕ್ರಮಗಳಿಗೆ ಕರೆದುಕೊಂಡು ಬಂದು, ರಾಮಕೃಷ್ಣ ಆಶ್ರಮದಲ್ಲಿ ಯಾವುದೇ ಬಗೆಯ ಮೇಲು ಕೀಳೆಂಬ ಭೇದವಿಲ್ಲ ಎಂಬುದನ್ನು ಪ್ರತ್ಯಕ್ಷವಾಗಿ ತೋರಿಸಿದರು. ಇಷ್ಟೆಲ್ಲ ತಯಾರಿಯ ನಂತರ ಕೊಳಚೆಗೇರಿಯ ನಿವಾಸಿಗಳು ಆಶ್ರಮದ ವಿಶೇಷ ಆಧ್ಯಾತ್ಮಿಕ ಶಿಬಿರಕ್ಕೆ ಬರಲು ಅನುವಾದರು. ೧೪.೦೧.೨೦೦೭ರಂದು ಮೊಟ್ಟ ಮೊದಲ ಬಾರಿಗೆ ನಡೆದ ಶಿಬಿರದಲ್ಲಿ ೫೦ ಜನ ಭಾಗವಹಿಸಿದ್ದರು. ಆ ಶಿಬಿರದಲ್ಲಿ ಶ್ರೀರಾಮಕೃಷ್ಣರ ಜೀವನದ ಬಗ್ಗೆ ಪ್ರವಚನ ನಡೆಯಿತು.

ಇದೇ ರೀತಿ ಆಟೋರಿಕ್ಷಾ ಚಾಲಕರ ಸಂಘದ ನೇತಾರರ ಮೂಲಕ ಆಟೋರಿಕ್ಷಾ ಚಾಲಕರನ್ನು ಕರೆತರುವ ಕಾರ್ಯವೂ ನಡೆಯಿತು. ಭಕ್ತರನ್ನು ದ್ವಾರದ ಬಳಿಯೇ ಬಿಟ್ಟುಹೋಗುತ್ತಿದ್ದ ಆಟೋರಿಕ್ಷಾ ಚಾಲಕರಲ್ಲಿ ಅನೇಕರು ಆಶ್ರಮದ ಮಂದಿರವನ್ನು ಮೊಟ್ಟ ಮೊದಲ ಬಾರಿಗೆ ೨೮.೧.೨೦೦೭ರಂದು ಪ್ರವೇಶಿಸಿದರು. ಭಾಗವಹಿಸಿದ್ದ ೪೦ ಶಿಬಿರಾರ್ಥಿಗಳಿಗೆ ತಮ್ಮ ವೃತ್ತಿಯಲ್ಲಿ ನೈತಿಕತೆಯ ಮಹತ್ವವನ್ನು ಬೋಧಿಸಲಾಯಿತು ಮತ್ತು ಸಮವಸ್ತ್ರಗಳನ್ನು ಕೊಡುಗೆಯಾಗಿ ವಿತರಿಸಲಾಯಿತು.

ಹಾಗೆಯೆ ೨೬.೨.೨೦೦೭ರಂದು ಆಶ್ರಮದ ಎಲ್ಲ ಶ್ರಮಜೀವಿಗಳಿಗಾಗಿ ನಡೆದ ವಿಶೇಷ ಶಿಬಿರದಲ್ಲಿ, ಹೊರಗಿನಿಂದ ಬಂದಿದ್ದ ಹಲವಾರು ಕೂಲಿಕಾರ್ಮಿಕರು ಭಾಗವಹಿಸಿದ್ದು ವಿಶೇಷ.

ಚಮ್ಮಾರ ಬಂಧುಗಳು ಮತ್ತು ಅವರ ಕುಟುಂಬದವರಿಗಾಗಿ ೮.೦೪.೨೦೦೭ರಂದು ನಡೆದ ವಿಶೇಷ ಶಿಬಿರದಲ್ಲಿ ೧೦೦ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ವಿಶೇಷ ಪ್ರವಚನದ ಜತೆಗೆ, ಪಂಚೆ ಮತ್ತು ಸೀರೆಗಳನ್ನು ಕೊಡುಗೆಯಾಗಿ ಕೊಡಲಾಯಿತು.

ಪ್ರತಿ ಶಿಬಿರದಲ್ಲೂ ಶ್ರೀರಾಮಕೃಷ್ಣರು ಹೇಳಿದ ಕಥೆಗಳ ಚಲನಚಿತ್ರ ಪ್ರದರ್ಶನದಿಂದ ಮನರಂಜನೆಯ ಜತೆಗೆ ಉಪದೇಶವನ್ನೂ ಶಿಬಿರಾರ್ಥಿಗಳು ಪಡೆದುಕೊಂಡರು. ಅದಲ್ಲದೆ, ಆಶ್ರಮದ ಪುಷ್ಕಳವಾದ ಮಧ್ಯಾಹ್ನದ ಊಟವನ್ನು ಪ್ರಸಾದರೂಪವಾಗಿ ಸೇವಿಸಿದರು.

ಹೀಗೆ ಆಶ್ರಮದ ಶಾಂತ ಪರಿಸರದ ಸವಿಯುಂಡ ಶಿಬಿರಾರ್ಥಿಗಳ ಮುಖದಲ್ಲಿ ಸಂತಸದ ಹೊನಲನ್ನು ಕಾಣಬಹುದಾಗಿತ್ತು. ಪ್ರತಿ ಶಿಬಿರದ ಅಂತ್ಯದಲ್ಲಿ ಅವರೆಲ್ಲ ತಮ್ಮ ತಮ್ಮ ಮನೆಗಳಿಗೆ ಶಾಂತಿ ಮತ್ತು ತೃಪ್ತಿಯ ಭಾವನೆಗಳನ್ನು ಹೊತ್ತು ತೆರಳಿದರು.

ಈ ಬಗೆಯ ವಿಶೇಷ ಆಧ್ಯಾತ್ಮಿಕ ಶಿಬಿರಗಳನ್ನು ಮತ್ತಷ್ಟು ನಡೆಸಲು ಆಶ್ರಮವು ನಿರ್ಧರಿಸಿದ್ದು, ಚಮ್ಮಾರ ಬಂಧುಗಳಿಗಾಗಿ ಎರಡನೆಯ ಶಿಬಿರ ಜುಲೈ ೧೫ರಂದು ನಡೆಯಿತು.



ಮೈಸೂರು ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ ಅವರು ಮಾತೆಯರಿಗೆ ಸೀರೆಗಳನ್ನು ವಿತರಿಸುತ್ತಿರುವ ದೃಶ್ಯ